ಸಾರ್ವಜನಿಕ ಶಿಕ್ಷಣ ಇಲಾಖೆ

(ರಾಮನಗರ ಜಿಲ್ಲಾ ಪಂಚಾಯತ್)

**ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ರಾಮನಗರ ಜಿಲ್ಲೆ ರಾಮನಗರ-562159**

ಸಂಖ್ಯೆ : ಎ2(6)ಸ.ಪ್ರೌ.ಶಾ/ರೆಡ್‌ಕ್ರಾಸ್/ಸಿ.4/2012-13

ದಿನಾಂಕ:05/01/2021

ನೆನಪೋಲೆ

ವಿಷಯ : ರಾಜ್ಯದ ಎಲ್ಲಾ ಸರ್ಕಾರಿ ಅನುದಾನಿತ / ಅನುದಾನರಹಿತ ಪ್ರೌಢ ಶಾಲೆಗಳಲ್ಲಿ ಕಿರಿಯ ರೆಡ್‌ಕ್ರಾಸ್ ಸಂಸ್ಥೆಗಳನ್ನು ಸ್ಥಾಪಿಸುವ ಬಗ್ಗೆ.

ಉಲ್ಲೇಖ : 1) ಸರ್ಕಾರದ ಆದೇಶ ಸಂಖ್ಯೆ : ಇಡಿ 192 ಎಸ್.ಎಲ್.ಬಿ2017 ದಿನಾಂಕ : 03/03/2020.

2) ಮಾನ್ಯ ಆಯುಕ್ತರ ಕಛೇರಿ ಸುತ್ತೋಲೆ ಸಂಖ್ಯೆ : ಸಿ4(6)/ಸ.ಪ್ರೌ.ಶಾ/ರೆಡ್‌ಕಾಸ್/94 / 2012-13. ದಿನಾಂಕ : 23/06/2020.

3) ಈ ಕಛೇರಿ ಪತ್ರ ಸಮ ಸಂಖ್ಯೆ, ದಿನಾಂಕ : 21/06/2020.

********

ಶಾಲೆಗಳಲ್ಲಿ ಕಿರಿಯ ರೆಡ್‌ಕ್ರಾಸ್ ಶಾಖೆಗಳನ್ನು ಪ್ರಾರಂಭಿಸುವುದರಿಂದ ಮಕ್ಕಳಲ್ಲಿ ಸಂಚಾರಿ ನಿಯಮ, ಸ್ವಚ್ಛತೆ, First-Aid, Disaster Management, Basic Competency Skill ಬಗ್ಗೆ ತರಬೇತಿ ಶಿಬಿರಗಳನ್ನು ಹಮ್ಮಿಕೊಳ್ಳಲಾಗುವುದು ರೆಡ್‌ಕ್ರಾಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು ಸರ್ಕಾರಕ್ಕೆ ತಿಳಿಸಿದ್ದು, ಇದಕ್ಕಾಗಿ ರಾಜ್ಯದ ಎಲ್ಲಾ ಸರ್ಕಾರಿ ಅನುದಾನಿತ / ಅನುದಾನರಹಿತ ಪ್ರೌಢಶಾಲೆಗಳಲ್ಲಿ ವಾರ್ಷಿಕ ಶಾಲಾ ಸದಸ್ಯತ್ವದ ಶುಲ್ಕ ರೂ. 100/-ಗಳನ್ನು (ಒಂದು ನೂರು ರೂಪಾಯಿಗಳು ಮಾತ್ರ) ಪಾವತಿಸಿ ನೋಂದಾಯಿಸಿಕೊಳ್ಳುವುದು ಹಾಗೂ ಪ್ರೌಢಶಾಲೆಗಳ (8 ರಿಂದ 10ನೇ ವಿದ್ಯಾರ್ಥಿಗಳು) ರೂ.10/- ಗಳನ್ನು ಪ್ರತಿ ವಿದ್ಯಾರ್ಥಿಗಳಿಂದ ಪಡೆದು ಅದರಲ್ಲಿ ರೂ.6/-ಗಳನ್ನು ಕಿರಿಯ ರೆಡ್‌ಕ್ರಾಸ್ ಚಟುವಟಿಕೆಗಳಿಗೆ ಹಾಗೂ ರೂ.4/-ಗಳನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳುವಂತೆ ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ ಅನುಮತಿ ನೀಡಲಾಗಿದೆ.

ಆದಾಗ್ಯೂ ಉಲ್ಲೇಖ (3) ರಂತೆ ಈಗಾಗಲೆ ತಮಗೆ ಕ್ರಮ ವಹಿಸಿ ವರದಿ ಮಾಡಲು ತಿಳಿಸಿದ್ದರು ಸಹ ಯಾವುದೆ ಕ್ರಮದ ಬಗ್ಗೆ ವರದಿ ಬಂದಿಲ್ಲದಿರುವುದರಿಂದ ಇದನ್ನು ಗಂಭೀರವಾಗಿ ಪರಿಗಣಿಸುತ್ತಾ ಈ ಪತ್ರ ತಲುಪಿದ ಒಂದು ವಾರದಲ್ಲಿ ಎಲ್ಲಾ ಮುಖ್ಯ ಶಿಕ್ಷಕರು ಕ್ರಮವಹಿಸಿರುವ ವರದಿ ಪಡೆದು ಈ ಕಛೇರಿಗೆ ವರದಿ ಸಲ್ಲಿಸುವುದು. ಒಂದು ವೇಳೆ ನಿಗದಿತ ಅವಧಿಯಲ್ಲಿ ಮಾಹಿತಿ ಸಲ್ಲಿಸದಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ನಿಮ್ಮನ್ನೆ ಜವಾಬ್ದಾರಿ ಮಾಡಲಾಗುವುದು.

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ರಾಮನಗರ ಜಿಲ್ಲೆ.

ಗೆ,

ಕ್ಷೇತ್ರ ಶಿಕ್ಷಣಾಧಿಕಾರಿಗಳು,
ಚನ್ನಪಟ್ಟಣ/ಮಾಗಡಿ/ಕನಕಪುರ/ರಾಮನಗರ.

ಪ್ರತಿಯನ್ನು,

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಾಹಿತಿಗಾಗಿ ವಂದನೆಗಳೊಂದಿಗೆ ಸಲ್ಲಿಸಲಾಗಿದೆ.
2. ಕಛೇರಿ ಪ್ರತಿ.

INDIAN RED CROSS SOCIETY
KARNATAKA STATE BRANCH
Date 23/3
06/01/2021